# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಸಿಡಿ/1579/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 06/11/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಶ್ರೀ ದಯಾನಂದ್ ಸಾಗರ್ ಬಿ.ಹೆಚ್, ಲೇಬರ್ ಇನ್ಸ್‌ಪೆಕ್ಟರ್, ಕಾರ್ಮಿಕ ಇಲಾಖೆ, ಆನೇಕಲ್ ವೃತ್ತ, ಬೆಂಗಳೂರು ನಗರ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಭ್ರಷ್ಟಾಚಾರ ನಿಗ್ರಹ ದಳ ಕೇಂದ್ರ ವಲಯ, ಬೆಂಗಳೂರು ಪೊಲೀಸ್ ಅಧೀಕ್ಷಕರು ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ದಯಾನಂದ್ ಸಾಗರ್ ಬಿ.ಹೆಚ್, ಲೇಬರ್ ಇನ್ಸ್‌ಪೆಕ್ಟರ್, ಕಾರ್ಮಿಕ ಇಲಾಖೆ, ಆನೇಕಲ್ ವೃತ್ತ, ಬೆಂಗಳೂರು ನಗರ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಮಂಜುನಾಥ್ ಬಿನ್ ಗಿರಿಯಪ್ಪ, ವಾಸ: ಎಂ. ಮಡಿವಾಳ, ಮರಸೂರು ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ

1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) ದೂರಿನ ಸಂಕ್ಷಿಪ್ತ ಸಾರಾಂಶ:-

i. ದೂರುದಾರರು ಶ್ರೀ ಮಂಜುನಾಥ ಎಂಟರ್‌ಪ್ರೈಸಸ್ ಎಂಬ ಹೆಸರಿನಲ್ಲಿ ಕಳೆದ ಎರಡು ವರ್ಷಗಳಿಂದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಫ್ಯಾಕ್ಟರಿಗಳಿಗೆ ಗುತ್ತಿಗೆ ಕಾರ್ಮಿಕರನ್ನು ಸಪ್ಲೈ ಮಾಡುತ್ತಿದ್ದು ಅದರಂತೆ ಟಿ.ವಿ.ಎಸ್. ಕಂಪನಿಗೆ ಕೆಲಸ ಮಾಡುವ ಐಕಾನ್ ಕಂಪನಿಗೆ ಸುಮಾರು ಒಂದು ವರ್ಷದಿಂದ 60 ಜನ ಕಾರ್ಮಿಕರನ್ನು ಕೆಲಸಕ್ಕೆ ಒದಗಿಸಿರುತ್ತಾರೆ. ಎದುರುದಾರ್‌ರವರು ಬೊಮ್ಮಸಂದ್ರ ಇಂಡಸ್ಟ್ರೀಯಲ್ ಏರಿಯಾಗೆ ಲೇಬರ್ ಇನಸ್ಪೆಕ್ಟರ್ ಆಗಿ ಬಂದಾಗಿನಿಂದ ದೂರುದಾರರಿಗೆ ಸಣ್ಣ ಪುಟ್ಟ ವಿಚಾರಗಳಿಗೆ ತೊಂದರೆ ಮಾಡಿ ಮೂರು ತಿಂಗಳಿಗೊಮ್ಮೆ 15,000/- ರೂ.ಗಳನ್ನು ಲಂಚವಾಗಿ ಕೊಡುವಂತೆ ದೂರುದಾರರಿಗೆ ಒತ್ತಾಯ ಮಾಡುತ್ತಿದ್ದುದರಿಂದ ದೂರುದಾರರು ರೂ. 7,000/- ದಂತೆ ಎರಡು ಸಲ ಹಣವನ್ನು ನೀಡಿರುತ್ತಾರೆ. ಎದುರುದಾರರು ಮತ್ತೆ ಹಣ ನೀಡಲಿಲ್ಲವೆಂದು ದೂರುದಾರರಿಗೆ ನೋಟೀಸನ್ನು ಜಾರಿ ಮಾಡಿರುತ್ತಾರೆ. ತಿಂಗಳಿಗೆ 5,000/- ರೂ.ಗಳ ಲಂಚದ ಹಣವನ್ನು ನೀಡಬೇಕು, ಇಲ್ಲವಾದಲ್ಲಿ ಕೇಸು ದಾಖಲಿಸುವುದಾಗಿ ದೂರುದಾರರಿಗೆ ತಿಳಿಸಿರುತ್ತಾರೆ. ದಿನಾಂಕ 22/03/2017 ರಂದು ಎದುರುದಾರರು ತಮ್ಮ ಮೊಬೈಲ್‌ನಿಂದ ದೂರುದಾರರಿಗೆ ಕರೆ ಮಾಡಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಸಂಭಾಷಣೆಯನ್ನು ಅವರ ಮೊಬೈಲ್‌ನ ಮೆಮೊರಿ ಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 25/03/2017 ರಂದು ಬೆಳಿಗ್ಗೆ 11-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ಪೊಲೀಸ್ ಠಾಣೆಗೆ ಹಾಜರಾಗಿ

ತನಿಖಾಧಿಕಾರಿಯ ಮುಂದೆ ದೂರು ನೀಡಿದ್ದನ್ನು ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 04/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಶ್ರೀನಿವಾಸ ಬಿನ್ ಮುನಿವೆಂಕಟಪ್ಪ ಮತ್ತು ಶ್ರೀ ಎಸ್. ಶ್ರೀಧರ ಬಿನ್ ಬಿ.ಕೆ. ಸಣ್ಣತಿಮ್ಮೇಗೌಡ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ದೂರುದಾರರು ಪಂಚರ ಸಮಕ್ಷಮ ಮೆಮೋರಿ ಕಾರ್ಡನ್ನು ಹಾಜರುಪಡಿಸಲು ಸದರಿ ಮೆಮೋರಿ ಕಾರ್ಡನ್ನು ಕಾರ್ಡ್ ರೀಡರ್ ಮೂಲಕ ಲ್ಯಾಪ್‌ಟಾಪ್‌ಗೆ ಹಾಕಿ ಪರಿಶೀಲಿಸಿದ್ದು ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ಮೆಮೋರಿ ಕಾರ್ಡಿನಲ್ಲಿನ ಧ್ವನಿ ಮುದ್ರಿತ ಸಂಭಾಷಣೆಯ ಲಿಪೀಕರಣವನ್ನು ತಮ್ಮ ಸಿಬ್ಬಂದಿರವರಿಂದ ಜರುಗಿಸಿ ಸದರಿ ಮೆಮೋರಿ ಕಾರ್ಡನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ (ರೂ. 500/- ಮುಖ ಬೆಲೆಯ 10 ನೋಟುಗಳು) ಒಟ್ಟು 5,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರ್‌ಗಳನ್ನು ಮತ್ತು ಮೌಲ್ಯವನ್ನು ತನಿಖಾಧಿಕಾರಿಯವರ ಸೂಚನೆಯಂತೆ ಪಂಚ-2 ರವರು ಪರಿಶೀಲಿಸಿ ಹೇಳಿಸಿ, ಪಂಚ-1 ರವರು ಒಂದು ಹಾಳೆಯಲ್ಲಿ ನಮೂದು ಮಾಡಿಕೊಂಡ ವಿವರದ ಹಾಳೆಗೆ ತಾಳೆ ಮಾಡಿ ನೋಡಲಾಗಿ ತಾಳೆಯಾಗಿರುವುದು ಖಾತ್ರಿ ಮಾಡಿಕೊಂಡಿರುತ್ತಾರೆ. ನಂತರ ಪೊಲೀಸ್

ಸಿಬ್ಬಂಧಿ ಸದರಿ ನೋಟುಗಳಿಗೆ ಪಿನಾಪ್ತಲಿನ್ ಪೌಡರನ್ನು ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ ಸಾಕ್ಷಿ-1 ರವರು ದೂರುದಾರರು ಧರಿಸಿದ ಪ್ಯಾಂಟಿನ ಬಲ ಭಾಗದ ಮುಂಭಾಗದ ಜೇಬನ್ನು ಪರಿಶೀಲಿಸಿ ಯಾವುದೇ ವಸ್ತುಗಳು ಇಲ್ಲದಿರುವ ಬಗ್ಗೆ ಖಾತ್ರಿ ಪಡಿಸಿ ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ -2 ರವರು ತಮ್ಮ ಬಳಿ ಇದ್ದ ಪಿನಾಪ್ತಲಿನ್ ಪುಡಿ ಲೇಪಿತ ಲಂಚದ ಹಣವನ್ನು ದೂರುದಾರರ ಪ್ಯಾಂಟಿನ ಮುಂಭಾಗದ ಬಲಭಾಗದ ಜೇಬಿನಲ್ಲಿಟ್ಟಿರುತ್ತಾರೆ. ನಂತರ ಪಂಚ -2 ಶ್ರೀ ಎಸ್. ಶ್ರೀಧರ ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ, ಬಣ್ಣರಹಿತವಾದ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎಲ್ಲರಿಗೂ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿ ತಾನೂ ಸಹ ಸೋಪಿನಿಂದ ಕೈಗಳನ್ನು ತೊಳೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-2 ರವರ ಮೂಲಕ ದೂರುದಾರರ ಶರ್ಟಿನ ಮೇಲಿನ ಜೇಬಿನಲ್ಲಿ ಸೋನಿ ವಾಯ್ಸ್ ರೆಕಾರ್ಡರನ್ನು ಇರಿಸಿ ಅದನ್ನು ಬಳಸುವ ರೀತಿಯನ್ನು ದೂರುದಾರರಿಗೆ ತಿಳಿಸಿ ಎದುರುದಾರರನ್ನು ಭೇಟಿ ಮಾಡಿದ ಸಮಯದಲ್ಲಿ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡು ನಂತರ ತನಿಖಾ ಕಾಲದಲ್ಲಿ ಹಾಜರುಪಡಿಸಬೇಕಾಗಿ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 25/03/2017 ರಂದು ಮಧ್ಯಾಹ್ನ 12-10 ಘಂಟೆಯಿಂದ 1-25 ಘಂಟೆಯವರೆಗೆ ಬೆಂಗಳೂರು

ಪಿನಾಪ್ತಲಿನ್ ಪೌಡರ್ ಲೇಪಿತ ರೂ. 5,000/- ಲಂಚದ ಹಣವನ್ನು ನೀಡಿದಾಗ ಎದುರುದಾರರು ತಮ್ಮ ಬಲಗೈಯಿಂದ ಪಡೆದು ತಮ್ಮ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನೀಡಿದ ಸೂಚನೆಯಂತೆ ತಮ್ಮ ಮೂಗನ್ನು ಬಲಗೈನಿಂದ ಸವರಿಕೊಳ್ಳುವ ಮೂಲಕ ಎದುರುದಾರರಿಗೆ ಲಂಚದ ಹಣವನ್ನು ನೀಡಿರುವ ಬಗ್ಗೆ ಸೂಚನೆಯನ್ನು ನೀಡಿರುತ್ತಾರೆ. ತನಿಖಾಧಿಕಾರಿಗಳು ಅಲ್ಲಿಗೆ ಬಂದು ತಮ್ಮ ಪರಿಚಯ ಮಾಡಿಸಿಕೊಂಡು ತನಿಖೆಯಲ್ಲಿ ಸಹಕರಿಸುವಂತೆ ಎದುರುದಾರರಿಗೆ ಸೂಚಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯಂತೆ ಎದುರುದಾರರು ತಮ್ಮ ಎರಡೂ ಕೈಗಳನ್ನು ಮಾದರಿಗೆ ತೆಗೆದು ಉಳಿದುಕೊಂಡಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಬಣ್ಣ ರಹಿತವಾದ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದೀರಿ ಎಂದು ಕೇಳಿದಾಗ ಅವರು ತಾನು ಧರಿಸಿದ್ದ ಶರ್ಟಿನ ಮೇಲಿನ ಎಡಭಾಗದ ಜೇಬಿನಲ್ಲಿಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳ ಸೂಚನೆ ಮೇರೆಗೆ ಪಂಚ -1 ರವರು ಎದುರುದಾರರ ಶರ್ಟಿನ ಜೇಬಿನಿಂದ 500/- ರೂ. ಮುಖಬೆಲೆಯ 10 ನೋಟುಗಳು ಒಟ್ಟು ರೂ. 5,000/- ಇರುವ ಬಗ್ಗೆ ತಿಳಿಸಿ ಹಾಜರ್‌ಪಡಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರು ಧರಿಸಿದ್ದ ಶರ್ಟಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಎದುರುದಾರರು ಲಂಚದ ಹಣವನ್ನಿಟ್ಟಿದ್ದ ಶರ್ಟಿನ ಎಡಭಾಗದ ಮೇಲಿನ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಲಾಗಿ ದ್ರಾವಣವು

ಗ್ರಾಮಾಂತರ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iv. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಹೊರಟಾಗ ತನಿಖಾಧಿಕಾರಿಯವರು ದೂರುದಾರರಿಗೆ ತನ್ನ ಮೊಬೈಲ್‌ನಿಂದ ಎದುರುದಾರರಿಗೆ ಕರೆ ಮಾಡಿ ಯಾವ ಸ್ಥಳಕ್ಕೆ ಬರಬೇಕೆಂದು ಕೇಳುವಂತೆ ಸೂಚಿಸಿದಾಗ ಅವರು ಎದುರುದಾರರು ಕರೆ ಮಾಡಿ ಕೇಳಿದಾಗ ಎದುರುದಾರರು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕರ್ನಾಟಕ ಬ್ಯಾಂಕ್ ಹತ್ತಿರ ಬರುವಂತೆ ತಿಳಿಸಿದ ಪ್ರಕಾರ ತನಿಖಾಧಿಕಾರಿಗಳು ಎಲ್ಲರನ್ನೂ ಸರ್ಕಾರಿ ವಾಹನದಲ್ಲಿ ಬೊಮ್ಮಸಂದ್ರ–ಜಿಗಣಿ ಲಿಂಕ್ ರಸ್ತೆಯ ಬಳಿ ಇರುವ ಜಾಕಿ ಕಂಪನಿಯಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ದೂರುದಾರರು ಮತ್ತು ನೆರಳು ಸಾಕ್ಷಿಯಾದ ಶ್ರೀನಿವಾಸ ಬಿನ್ ಮುನಿವೆಂಕಟಪ್ಪ ರವರಿಗೆ ಸೂಕ್ತ ತಿಳುವಳಿಕೆಯನ್ನು ನೀಡಿ ಎದುರುದಾರರನ್ನು ಭೇಟಿಯಾಗಲು ಕಳುಹಿಸಿರುತ್ತಾರೆ. ಆ ಪ್ರಕಾರ ದೂರುದಾರರು ಮತ್ತು ನೆರಳು ಸಾಕ್ಷಿದಾರರು ಕೂಡಿಕೊಂಡು ಜಾಕಿ ಕಂಪನಿಯ ಬಳಿ ಎದುರುದಾರರಿಗೆ ಕಾಯುತ್ತಿದ್ದಾಗ ಮಧ್ಯಾಹ್ನ 2–57 ಘಂಟೆಗೆ ಎದುರುದಾರರ ದೂರುದಾರರ ಮೊಬೈಲಿಗೆ ಕರೆ ಮಾಡಿ ಜಾಕಿ ಕಂಪನಿಯಿಂದ ಸ್ವಲ್ಪ ಮುಂದೆ ಇರುವ ಅರವಿಂದ್ ಲಿಮಿಟೆಡ್ ಬಳಿ ಬರುವಂತೆ ಸೂಚಿಸಿದಾಗ ಅವರಿಬ್ಬರೂ ಅಲ್ಲಿಗೆ ಬಂದು ಕಂಪನಿಯ ಕಂಪೌಂಡಿನ ಬಳಿ ನಿಂತಾಗ ಎದುರುದಾರರು ಇಂಡಿಕಾ ಕಾರು ಸಂಖ್ಯೆ ಕೆ.ಎ.05–ಎ.ಸಿ–2625 ವಾಹನದಿಂದ ಇಳಿದು ದೂರುದಾರರಿಗೆ ಭೇಟಿ ಮಾಡಿದಾಗ ದೂರುದಾರರು ಎದುರುದಾರರನ್ನು ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ಮಾಡಿಕೊಡುವುದಾಗಿ ತಿಳಿಸಿ ಲಂಚದ ಹಣದ ಬಗ್ಗೆ ವಿಚಾರಿಸಿರುತ್ತಾರೆ. ಆಗ ದೂರುದಾರರು ತಮ್ಮ ಬಳಿಯಿದ್ದ

ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಕುರಿತು ದೂರುದಾರಿಂದ ಪಡೆದುಕೊಂಡಿರುವ ಲಂಚದ ಹಣದ ಬಗ್ಗೆ ಸಮಜಾಯಿಷಿಯನ್ನು ನೀಡುವಂತೆ ತಿಳಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ನನ್ನ ಮೇಲಿನ ಆಪಾದನೆಯು ಸತ್ಯಕ್ಕೆ ದೂರವಾಗಿದೆ, ನಾನು ಯಾವುದೇ ಬೇಡಿಕೆ ಇಟ್ಟಿರುವುದಿಲ್ಲ ದೂರುದಾರರು ನನಗೆ ಬಲವಂತವಾಗಿ ಹಣ ನೀಡಲು ಬಂದಿದ್ದು ನನ್ನ ಕೈಗೆ ನೀಡಿದಾಗ ಬೇಡ ಎಂದಾಗ ನನ್ನ ಜೇಬಿಗೆ ಬಲವಂತವಾಗಿ ಇಟ್ಟಿರುತ್ತಾರೆ" ಎಂದು ನೀಡಿದ ಸಮಜಾಯಿಷಿಗೆ ದೂರುದಾರರ ಅಭಿಪ್ರಾಯವನ್ನು ಕೇಳಿದಾಗ ಅವರು ದೂರುದಾರರ ಹೇಳಿಕೆಯು ಸತ್ಯಕ್ಕೆ ದೂರವಾಗಿದ್ದು ಸದರಿಯವರು ತಮ್ಮ ಬೇಡಿಕೆಯಂತೆ ಲಂಚದ ಹಣವನ್ನು ಪಡೆದುಕೊಂಡು ತಾನು ಧರಿಸಿದ್ದ ಶರ್ಟಿನ ಮೇಲಿನ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ತನಿಖಾಧಿಕಾರಿಗಳು ನೆರಳು ಸಾಕ್ಷಿರವರ ಅಭಿಪ್ರಾಯವನ್ನು ಕೇಳಿದಾಗ ಅವರು ಎದುರುದಾರರು ಲಂಚದ ಹಣವನ್ನು ದೂರುದಾರರಿಂದ ಕೇಳಿ ಪಡೆದುಕೊಂಡು ಶರ್ಟಿನ ಮೇಲಿನ ಎಡ ಜೇಬಿನಲ್ಲಿಟ್ಟುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ದೂರುದಾಥರು ಎದುರುದಾರರಿಗೆ ಲಂಚದ ಹಣ ನೀಡುವಾಗ ನೀಡಿದ್ದ ವಾಯ್ಸ್ ರೆಕಾರ್ಡರ್‌ನ ರೆಕಾರ್ಡಿಂಗ್ ಪರಿಶೀಲನೆ ಮಾಡಲಾಗಿ ಅದರಲ್ಲಿ ಯಾವುದೇ ರೆಕಾರ್ಡಿಂಗ್ ಆಗಿರುವುದಿಲ್ಲ. ಈ ಬಗ್ಗೆ ದೂರುದಾರರನ್ನು ಕೇಳಿದಾಗ ಇದ್ದಕ್ಕಿದ್ದ ಹಾಗೆ ಎದುರುದಾರರೇ ಬಂದು ಲಂಚದ ಹಣ ಕೊಡು ಎಂದು ಕೇಳಿದ್ದಕ್ಕೆ ಗಾಬರಿಯಾಗಿ ರೆಕಾರ್ಡರನ್ನು ಆನ್ ಮಾಡಲು ಮರೆತಿರುತ್ತೇನೆ ಎಂದು ತಿಳಿಸಿರುತ್ತಾರೆ. ಟ್ರಾಪ್ ಪಂಚನಾಮೆಯ ಎಲ್ಲಾ ನಡವಳಿಕೆಗಳನ್ನು ಅರವಿಂದ್ ಲಿಮಿಟೆಡ್‌ನ ಹೆಚ್. ಆರ್. ಮ್ಯಾನೇಜರ್ ಆದ ಶ್ರೀ ವಿನೋದ್‌ಕುಮಾರ್‌ರವರ ಕೊಠಡಿಯಲ್ಲಿ ಲ್ಯಾಪ್‌ಟಾಪ್‌ಗೆ ವಿದ್ಯುತ್ ಸಂಪರ್ಕ ಪಡೆದುಕೊಂಡು ದಿ:

25/03/2017 ರಂದು ಮಧ್ಯಾಹ್ನ 3-25 ಘಂಟೆಯಿಂದ ಸಾಯಂಕಾಲ 5-00 ಘಂಟೆಯವರೆಗೆ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿ ದಾಖಲಿಸಿರುತ್ತಾರೆ. ಘಟನಾವಳಿಗಳ ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ.

v. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 23/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

vi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ಮಂಜುನಾಥ್ ಎಂಟರ್‌ಪ್ರೈಸಸ್ ಎಂಬ ಹೆಸರಿನ ಕಾರ್ಮಿಕ ಗುತ್ತಿಗೆ ಕಂಪನಿಯನ್ನು ಹೊಂದಿದ್ದು ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕಾರ್ಮಿಕ ನಿಯಮಾವಳಿಯಂತೆ ಎಲ್ಲಾ ಅನುಕೂಲಗಳನ್ನು ಒದಗಿಸಿರುವ ಬಗ್ಗೆ ಎದುರುದಾರರು ದಿ: 01/02/2017 ರಂದು ಪರಿವೀಕ್ಷಣೆ ನಡೆಸಿ ನಿರೀಕ್ಷಣಾ ಟಿಪ್ಪಣಿ ನೀಡಿ ಕಾರ್ಮಿಕರಿಗೆ ನಿಯಮಾವಳಿಯಂತೆ ಸವಲತ್ತುಗಳನ್ನು ನೀಡದೇ ಇರುವ ಬಗ್ಗೆ ಕ್ರಮ ಜರುಗಿಸುವುದಾಗಿ ಸೂಚಿಸಿ ಅದನ್ನು ತಪ್ಪಿಸುವ ಸಲುವಾಗಿ ಪ್ರತಿ ಮಾಹೆ ರೂ. 7,000/- ದಂತೆ ಲಂಚ ನೀಡುವಂತೆ ದೂರುದಾರರಿಗೆ ಬೇಡಿಕೆ ಇಟ್ಟು ರೂ. 15,000/-ಗಳನ್ನು ಮುಂಗಡವಾಗಿ ಪಡೆದುಕೊಂಡು ಉಳಿದ ಮೊತ್ತಕ್ಕೆ ಒತ್ತಾಯ ಮಾಡಿ ದೂರುದಾರರಿಂದ ಲಂಚದ ಹಣವಾದ ರೂ.

5,000/- ಗಳನ್ನು ಪಡೆದುಕೊಂಡು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ದಯಾನಂದ್ ಸಾಗರ್ ಬಿ.ಹೆಚ್, ಲೇಬರ್ ಇನ್ಸ್‌ಪೆಕ್ಟರ್, ಕಾರ್ಮಿಕ ಇಲಾಖೆ, ಆನೇಕಲ್ ವೃತ್ತ, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.